# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೆಚ್.ಎ.ಎಲ್ ಏರ್‌ಪೋರ್ಟ್

## ಉಪವಿಭಾಗ ಮಹದೇವಪುರ ವಲಯ, ಬೆಂಗಳೂರು

ಸಂಖ್ಯೆ.ಬಿಬಿಎಂಪಿ/ಸ.ಕಾ.ಅ/ಹೆಚ್.ಎ.ಎಲ್/ಪಿಆರ್/ 05/2022-23 ದಿನಾಂಕ: 08-11-2022

### 05 ನೇ ವಾರ್ಡ್ ಸಮಿತಿ ಸಭೆಯ ನಡಾವಳಿಗಳು.

ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಾನ್ಯ ಆಯುಕ್ತರು ಕಛೇರಿ ಆದೇಶ ಸಂ: ಬಿ12(5)/ಪಿಆರ್/35/2020–21 ದಿನಾಂಕ:04/04/2022, ಆದೇಶದಂತೆ ಜಂಟಿ ಆಯುಕ್ತರು ಮಹದೇವಪುರ ವಲಯ ರವರ ಕಛೇರಿ ಆದೇಶ ಸಂ:ಜಂಆ/ಮವ/ಪಿ.ಎಸ್/ 1651/2022–23 ದಿನಾಂಕ: 18–07–2022 ರಂತೆ ಶ್ರೀ.ಸೋಮಯ್ಯ.ಜಿ.ಡಿ , ಸಹಾಯಕ ಅಭಿಯಂತರು (ವಾರ್ಡ್ ನಂ–91 .ಎ.ನಾರಾಯಣಪುರ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರನ್ನು ವಾರ್ಡ್ ನಂ–91 .ಎ.ನಾರಾಯಣಪುರದ ವಾರ್ಡ್ ಸಮಿತಿ ಸಭೆಯ ನೋಡಲ್ ಅಧಿಕಾರಿಯನಾಗಿ ನೇಮಿಸಿರುತ್ತಾರೆ. ಅದರಂತೆ ದಿನಾಂಕ:23–09–2022ರಂದು ನೋಡಲ್ ಅಧಿಕಾರಿಯಾದ ಶ್ರೀ.ಸೋಮಯ್ಯ.ಜಿ.ಡಿ, ಸಹಾಯಕ ಅಭಿಯಂತರು (ವಾರ್ಡ್ ನಂ–91 ಎ.ನಾರಾಯಣಪುರ) ರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು ಈ ಕೆಳಕಂಡಂತೆ ಇರುತ್ತದೆ.

**ಉಪಸ್ಥಿತರು:**

| ಕ್ರ.ಸಂ | ಹೆಸರು | ಹುದ್ದೆ |
|---|---|---|
| | ಅಧಿಕಾರಿಗಳು | |
| 1 | ಶ್ರೀ.ಜಿ.ಡಿ.ಸೋಮಯ್ಯ | ವಾರ್ಡ್ ಸಮಿತಿಯ ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ನಂ.56 ಎ.ನಾರಾಯಣಪುರ |
| 2 | ಶ್ರೀ. ಪ್ರಭಾಕರನ್ | ಕಂದಾಯ ಪರಿವೀಕ್ಷಕರು |
| 3 | ಶ್ರೀ.ಮಹಮದ್ ಮುದಾಸೀರ್ | ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 4 | ಶ್ರೀಮತಿ.ಮಂಜುಳ | ಹಿರಿಯ ಆರೋಗ್ಯ ಅಧಿಕಾರಿ |
| 5 | ಶ್ರೀಮತಿ.ಸುವರ್ಣ ಹೆಚ್.ಸಿ | ಕಿರಿಯ ಆರೋಗ್ಯ ನಿರೀಕ್ಷಕರು |
| 6 | ಶ್ರೀ.ರಾಜಪ್ಪ.ಕೆ | ಟ್ರಾಫಿಕ್ ಪೋಲೀಸ್, ಕೆ.ಆರ್.ಪುರ |
| 7 | ಶ್ರೀಮತಿ. ನಾಗಮಣಿ | ನರ್ಸ್ |
| | ಸಂಘದ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು | |
| 8 | ಶ್ರೀ.ಸುರೇಶ್.ವಿ | ಎ–ನಾರಾಯಣಪುರ |
| 9 | ಶ್ರೀ.ಜಿ.ಪ್ರದೀಪ್ ರೆಡ್ಡಿ | ಎ–ನಾರಾಯಣಪುರ |
| 10 | ಶ್ರೀ.ಸುನಿಲ್ | ಎ–ನಾರಾಯಣಪುರ |
| 11 | ಶ್ರೀ.ಎ.ಗಣೇಶ್ | ಎ–ನಾರಾಯಣಪುರ |
| 12 | ಶ್ರೀಮತಿ. ಸುಲೇಖಾ | ಎ–ನಾರಾಯಣಪುರ |
| 13 | ಶ್ರೀ. ಸುಭಾಷ್ | ಎ–ನಾರಾಯಣಪುರ |
| 14 | ಶ್ರೀ. ಶಂಕರ್ | ಎ–ನಾರಾಯಣಪುರ |
| 15 | ಶ್ರೀ.ರಾಜ | ಎ–ನಾರಾಯಣಪುರ |
| 16 | ಶ್ರೀ.ಎನ್.ನಾಗರಾಜ್ | ಎ–ನಾರಾಯಣಪುರ |
| 17 | ಶ್ರೀ.ಪ್ರದೀಪ್.ಜಿ | ಎ–ನಾರಾಯಣಪುರ |
| 18 | ಶ್ರೀಮತಿ. ವಸಂತ | ಎ–ನಾರಾಯಣಪುರ |
| 19 | ಶ್ರೀ. ಶ್ರೀರಾಮುಲು | ಎ–ನಾರಾಯಣಪುರ |
| 20 | ಶ್ರೀ.ಮಣಿ | ಎ–ನಾರಾಯಣಪುರ |

**<u>ನಡಾವಳಿ 1.</u> ಕೋವಿಡ್–19ರ ಸಾಂಕ್ರಮಿಕ ರೋಗಕ್ಕೆ ಸಂಬಂಧಿಸಿದಂತೆ, ಸೊಂಕು ಹರಡುವುದನ್ನು ತಡೆಗಟ್ಟುವ ಸಂಬಂಧ ತೆಗೆದುಕೊಳ್ಳಬೇಕಾದ ಮುಂಜಾಗ್ರತ ಕ್ರಮಗಳ ಬಗ್ಗೆ.**

ಆರೋಗ್ಯಾಧಿಕಾರಿಗಳು ಮಾತನಾಡಿ ಎ.ನಾರಾಯಣಪುರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕೋವಿಡ್–19ರ ಲಸಿಕೆ ಕೊಡುವುದನ್ನು ಸಂಪೂರ್ಣವಾಗಿ ನಿಲ್ಲಿಸಿದ್ದು ಇನ್ನೂ ಮುಂದೆ ಕೋವಿಡ್–19ರ ಲಸಿಕೆಯನ್ನು ಪಡೆಯಲು ಸಿ.ವಿ.ರಾಮನ್ ನಗರ ಅಥವಾ ಕೆ.ಆರ್.ಪುರದಲ್ಲಿರುವ ಆರೋಗ್ಯ ಕೇಂದ್ರಕ್ಕೆ ಹೋಗಬೇಕೆಂದು ಹಾಗೂ ಎ.ನಾರಾಯಣಪುರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯರು ಇಲ್ಲದ ಕಾರಣ ವೈದ್ಯಾಧಿಕಾರಿಯನ್ನು ನಿಯೋಜಿಸಲು ಸಂಬಂಧಪಟ್ಟ ಇಲಾಖೆಗೆ ಪತ್ರ ಬರೆಯಲು ಹಾಗೂ ಎ.ನಾರಾಯಣಪುರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಬಿ.ಪಿ ಮತ್ತು ಶುಗರ್ ತಪಾಸಣೆ ಯಂತ್ರವು ಸರಿಯಾಗಿ ಕಾರ್ಯಾನಿರ್ವಹಿಸುತ್ತಿಲ್ಲವೆಂದು ತಿಳಿಸಿರುತ್ತಾರೆ.

**<u>ನಡಾವಳಿ 2.</u> ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರು ಹಾಗೂ ಒಳಚರಂಡಿಗಳ ಸಂಬಂಧಿಸಿದ ವಿಷಯಗಳ ಬಗ್ಗೆ.**

ಫಾರ್ಡ್ ವ್ಯಾಪ್ತಿಯಲ್ಲಿ ಸಾರ್ವಜನಿಕರು ಮಾತಾನಾಡಿ ವಿವೇಕಾನಂದ ರಸ್ತೆ, ವಿ.ಎಸ್.ಆರ್ 3ನೇ ಮುಖ್ಯರಸ್ತೆ ಒಳಚರಂಡಿಯ ಕಾಮಗಾರಿ ಮಾಡಲು ರಸ್ತೆ ತುಂಡರಿಸಿರುವ ಭಾಗಗಳಿಗೆ ವೆಟ್ ಮಿಕ್ಸ್ ತುಂಬಬೇಕೆಂದು ಸಾರ್ವಜನಿಕರು ಕೋರಿರುತ್ತಾರೆ. ವಾರ್ಡ್ ವ್ಯಾಪ್ತಿಯಲ್ಲಿ ಪ್ರಸ್ತುತ ಕುಡಿಯುವ ನೀರನ್ನು ಶುಕ್ರವಾರ ಮತ್ತು ಭಾನುವಾರದಂದು ಬಿಡುತ್ತಿದ್ದು ಇದರಿಂದ ಉಳಿದ ದಿನಗಳಲ್ಲಿ ನೀರಿನ ಸಮಸ್ಯೆ ಹೆಚ್ಚಾಗುತ್ತಿರುವ ಕಾರಣ 2 ದಿನಕ್ಕೆ ಒಮ್ಮೆ ನೀರಿನ ಬಿಡಬೇಕೆಂದು ಸಾರ್ವಜನಿಕರು ಮನವಿ ಮಾಡಿಕೊಂಡಿರುತ್ತಾರೆ.

ಕ್ರಮ: ಬಿ.ಡಬ್ಲ್ಯೂಎಸ್.ಎಸ್.ಬಿ ಸಹಾಯಕ ಅಭಿಯಂತರರು.

**ನಡಾವಳಿ 3. ವಾರ್ಡ್‌ನಲ್ಲಿ ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಬಗ್ಗೆ.**

ವಾರ್ಡ್ ವ್ಯಾಪ್ತಿಯಲ್ಲಿ ಬ್ಲಾಕ್ ಸ್ಪಟ್‌ಗಳು ಹೆಚ್ಚಾಗುತ್ತಿದ್ದು, ಆ ಜಾಗಗಳಿಗೆ ಕಸದಗಾಡಿಗಳನ್ನು ಬೇಗ ಕಳುಹಿಸಿಕೋಡಬೇಕೆಂದು ಮತ್ತು ಆಂದ್ರ ಕ್ಲಾಲೋನಿಯಲ್ಲಿ ಸಂಜೆ ಕಸದ ಗಾಡಿಯನ್ನು ನಿಲ್ಲಿಸಬೇಕೆಂದು ಸಾರ್ವಜನಿಕರು ಕೋರಿರುತ್ತಾರೆ.

ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಅಧಿಕಾರಿಗಳು ಮಾತನಾಡಿ ವಾರ್ಡ್ ವ್ಯಾಪ್ತಿಗೆ 25 ಕಸದ ಗಾಡಿಗಳು ಅವಶ್ಯಕತೆಯಿರುತ್ತದೆ, ಆದರೆ ಪ್ರಸ್ತುತ 21 ಗಾಡಿಗಳಿದ್ದು ಇನ್ನೂ 4 ಗಾಡಿಗಳನ್ನು ನಿಯೋಜಿಸಬೇಕೆಂದು ತಿಳಿಸಿರುತ್ತಾರೆ.

ಕ್ರಮ: ಆರೋಗ್ಯಾಧಿಕಾರಿಗಳು.

**<u>ನಡಾವಳಿ 4.</u>ವಾರ್ಡ್‌ನ ವಿವಿಧ ಕಾಮಗಾರಿಗಳ ಅಭಿವೃದ್ದಿ ಕಾರ್ಯಗಳ ಬಗ್ಗೆ .**

ವಾರ್ಡ್‌ನ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಚರ್ಚಿಸಲಾಗಿದ್ದು.ವಾರ್ಡ್ ವ್ಯಾಪ್ತಿಯ ನೇತ್ರಾವತಿ, ಮೈತ್ರಿ ಸ್ಕೂಲ್, ಎ.ನಾರಾಯಣಪುರ ಮುಖ್ಯರಸ್ತೆ ಮತ್ತು 11ನೇ ಅಡ್ಡರಸ್ತೆ ವಿವೇಕಾನಂದ ಬೀದಿಯಲ್ಲಿ ರಸ್ತೆಗಳ ಕಾಮಗಾರಿ ಮತ್ತು ಚರಂಡಿಯ ಕಾಮಗಾರಿಯನ್ನು ಪ್ರಾರಂಭಿಸುವಂತೆ ಸಾರ್ವಜನಿಕರು ಒತ್ತಾಯಿಸಿದರು, ಅದರಂತೆ ಸಾರ್ವಜನಿಕರ ಸಮಸ್ಯೆಗಳನ್ನು ಬಗೆಹರಿಸುವಂತೆ ಸಂಬಂಧಪಟ್ಟ ಅಭಿಯಂತರರಿಗೆ ಸೂಚಿಸಲಾಯಿತು.

ಕ್ರಮ: ಸಹಾಯಕ ಅಭಿಯಂತರರು ವಾರ್ಡ್ 91

ನಡಾವಳಿ 5.ಬೀದಿ ದೀಪಗಳ ನಿರ್ವಹಣೆ ಬಗ್ಗೆ.

ವಾರ್ಡ್ ವ್ಯಾಪ್ತಿಯಲ್ಲಿ ಚಿಕ್ಕ ಸುಬ್ಬಣ್ಣ ರಸ್ತೆ, ಬಜಾರ್‌ಸ್ಟ್ರೀಟ್ 2ನೇ ಅಡ್ಡರಸ್ತೆ ಹಾಗೂ ಇಂದಿರಾಗಾಂಧಿ ಬೀದಿಗಳಲ್ಲಿ ಬೀದಿ ದೀಪಗಳು ಸರ್ಮಪಕವಾಗಿ ಉರಿಯುತ್ತಿಲ್ಲವೆಂದು ಸಾರ್ವಜನಿಕರು ತಿಳಿಸಿರುತ್ತಾರೆ, ಅದರಂತೆ ಕೊಡಲೇ ಕ್ರಮ ವಹಿಸಬೇಕೆಂದು ಸಂಬಂಧಿಸಿದ ಅಭಿಯಂತರರಿಗೆ ತಿಳಿಸಲು ತೀರ್ಮಾನಿಸಲಾಯಿತು.

8/11/22

ನೋಡಲ್ ಅಧಿಕಾರಿ ಹಾಗೂ ಸದಸ್ಯ ಕಾರ್ಯದರ್ಶಿ
ಸಹಾಯಕ ಅಭಿಯಂತರರು ವಾರ್ಡ್ ನಂ.91
ಎ.ನಾರಾಯಣಪುರ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು:-

1. ಮಾನ್ಯ ಜಂಟಿ ಆಯುಕ್ತರು, ಮಹದೇವಪುರ ವಲಯ ರವರ ಮಾಹಿತಿಗಾಗಿ ರವಾನಿಸಿದೆ.
2. ಮುಖ್ಯ ಅಭಿಯಂತರರು, ಮಹದೇವಪುರ ವಲಯ ರವರ ಮಾಹಿತಿಗಾಗಿ ರವಾನಿಸಿದೆ.
3. ಕಛೇರಿ ಪ್ರತಿ.